ಕರ್ನಾಟಕವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 931+932 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಕೆ.ಅಬ್ದುಲ್ ಜಬ್ಬರ್ ಮತ್ತು ಶ್ರೀ ಶಶೀಲ್ ಜಿ. ನಮೋಶಿ |
| ಉತ್ತರಿಸಬೇಕಾದ ದಿನಾಂಕ: | 14.07.2023 |
| ಉತ್ತರಿಸುವ ಸಚಿವರು: | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವಜನ ಸೇವೆಗಳು ಹಾಗೂ ಕ್ರೀಡಾ ಸಚಿವರು: |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2020ರಲ್ಲಿ ಕೇಂದ್ರ ಸರ್ಕಾರದ ಪರಿಶಿಷ್ಟ ಪಂಗಡದ ತಿದ್ದುಪಡಿ ಕಾಯ್ದೆ 2020ರ ಅಧಿಸೂಚನೆ ಸಂಖ್ಯೆ 20.03.2020ರನ್ವಯ ಸಾಯ್ಕಡ, ನಾಯಕ (ಪರಿವಾರ, ತಳವಾರ ಒಳಗೊಂಡಂತೆ) ಜಾತಿಗಳನ್ನು ಪ್ರವರ್ಗ-1 ರಿಂದ ತೆಗೆದು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಿರುವ ಆದೇಶ ಮಾಡಿರುವ ರಾಜ್ಯ ಸರ್ಕಾರವು ಈ ಆದೇಶದಂತೆ ಗೆಜೆಟ್ ಹೊರಡಿಸಿ ನಂತರ ದಿನಾಂಕ:20.10.2022 ರಂದು ಪ್ರವರ್ಗ-1 ರಲ್ಲಿ ಬರುವ ತಳವಾರ, ಪರಿವಾರ ಜಾತಿಗಳನ್ನು ಹಿಂದುಳಿದ ವರ್ಗಗಳ ಜಾತಿಗಳ ಪಟ್ಟಿಯಿಂದ ತೆಗೆದುಹಾಕಿ ಆದೇಶಿಸಿದ್ದು ತದನಂತರ ಈ ಜಾತಿಗಳಿಗೆ 2022 ಡಿಸೆಂಬರ್ ತಿಂಗಳಿನಿಂದ ಎಸ್.ಟಿ ಜಾತಿ ಪ್ರಮಾಣ ಪತ್ರವನ್ನು ನೀಡಲು ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ | ಹೌದಾದಲ್ಲಿ, ರಾಜ್ಯ ಸರ್ಕಾರವು ಆದೇಶವನ್ನು ವಿಳಂಬವಾಗಿ ಹೊರಡಿಸಿರುವುದರಿಂದ ದಿನಾಂಕ:29.10.2022 ಕಿಂತಲೂ ಮೊದಲು ಈ ಸಮುದಾಯಕ್ಕೆ ಸೇರಿದ (ತಳವಾರ ಮತ್ತು ಪರಿವಾರ) ಫಲಾನುಭವಿಗಳು 2022-23ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಅರ್ಜಿ ಸಲ್ಲಿಸುವಾಗ ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ ಬರುವ "ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ" ದಿಂದ ಅರ್ಜಿ ಸಲ್ಲಿಸಿದ್ದರೂ ನಂತರ ಸರ್ಕಾರವು 2022 ಡಿಸೆಂಬರ್ ತಿಂಗಳಿನಲ್ಲಿ ಈ ಜಾತಿಗಳಿಗೆ ಎಸ್.ಟಿ ಪ್ರಮಾಣ ಪತ್ರವನ್ನು ನೀಡಲು ಪ್ರಾರಂಭಿಸಿದ್ದು, ಈಗಾಗಲೇ ಅರ್ಜಿ ಸಲ್ಲಿಸಿದವರು ಫಲಾನುಭವಿಗಳಾಗಿ ಆಯ್ಕೆಯಾಗಿದ್ದಾರೆ ಆದರೆ ಈಗ ದಾಖಲಾತಿ ಪತ್ರಗಳನ್ನು ಸಲ್ಲಿಸುವಾಗ ಪರಿಶಿಷ್ಟ ಪಂಗಡ ಎಂದು ಪ್ರಮಾಣ ಪತ್ರ ನೀಡಿರುವುದರಿಂದ ಇಲಾಖೆಯ ನಿಗಮದಿಂದ ಫಲಾನುಭವಿಗಳು ಇಲಾಖೆಗೆ ಒಳಪಡುವುದಿಲ್ಲವೆಂದು ಅವರ ಅರ್ಹತೆಯನ್ನು ತಿರಸ್ಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು (ವಿವರ ನೀಡುವುದು) | ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಸಂಬಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಸಕಇ 225 ಬಿಸಿಎ 2000 ದಿನಾಂಕ 30.03.2022ರ ಆದೇಶದಲ್ಲಿ 6(ಎ) ಯಿಂದ 6(ಎಕೆ) ವರೆಗೆ ಬರುವ ಜಾತಿ ಮತ್ತು ಉಪಜಾತಿಗಳಲ್ಲಿ ತಳವಾರ ಜಾತಿಯು ಈ ನಿಗಮಕ್ಕೆ ಸೇರಿರುವುದಿಲ್ಲ ಆದ್ದರಿಂದ ತಳವಾರ ಜಾತಿಯನ್ನು ಯೋಜನಾ ಸೌಲಭ್ಯಕ್ಕೆ ಅರ್ಜಿಗಳನ್ನು ಪರಿಗಣಿಸಿರುವುದಿಲ್ಲ ಹಾಗೂ ಪರಿವಾರ ಜಾತಿಗೆ ಸಂಬಂಧಿಸಿದಂತೆ 2022-23ನೇ ಸಾಲಿನ ಗಂಗಾ ಕಲ್ಯಾಣ ನೀರಾವರಿ ಯೋಜನೆಗೆ ಈ ನಿಗಮಕ್ಕೆ ಯಾವುದೇ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವುದಿಲ್ಲ. |
| ಇ) | ಯಾವ ಕಾಲಮಿತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ಈಗಾಗಲೇ ಅರ್ಜಿ ಸಲ್ಲಿಸಿ ಆಯ್ಕೆಯಾದ ವರ್ಗದ ಫಲಾನುಭವಿಗಳಿಗೆ ಈ ಯೋಜನೆಯನ್ನು ತಲುಪಿಸಲಾಗುವುದು? (ವಿವರ ನೀಡುವುದು). | ಉದ್ಭವಿಸುವುದಿಲ್ಲ. |

ಸಕಇ 118 ಎಸ್‌ಟಿಪಿ 2023

(ನಾಗೇಂದ್ರ.ಬಿ)
ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವಜನ
ಸೇವಾ ಮತ್ತು ಕ್ರೀಡಾ ಸಚಿವರು